ಮೇಲೆ ನಮೂದಿಸಿರುವ ಉಪಬಂಧದಂತೆ ಸಂಬಂಧಪಟ್ಟ ವ್ಯಕ್ತಿಗಳು ಅರ್ಜಿಯನ್ನು ಸಕ್ಷಮ ಪ್ರಾಧಿಕಾರಿಗಳಿಗೆ ಸಲ್ಲಿಸದೆ ಇದ್ದರೆ ಡೀಮ್ಡ್ ಕನ್‌ವರ್ಶನ್ ಪ್ರಶ್ನೆಯು ಉದ್ಭವಿಸುವುದಿಲ್ಲ. ಸಕ್ಷಮ ಪ್ರಾಧಿಕಾರಿಗಳ ಅನುಮತಿ ಇಲ್ಲದೆ ಭೂ ಬದಲಾವಣೆಯಾಗಿದ್ದರೆ, ಅಂತಹ ಸಂದರ್ಭಗಳಲ್ಲಿ ಕರ್ನಾಟಕ ಭೂಕಾಯ್ದೆ 1964ರ ಕಲಂ 96ರ ಪ್ರಕಾರ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಅಂತಹ ಬಲಾವಣೆಯನ್ನು ಕಾಂಪೌಂಡಿಗ್ ಶುಲ್ಕ ವಿಧಿಸಿ ಸಕ್ರಮಗೊಳಿಸಬಹುದಾಗಿದೆ.

ವಿಷಯ:- ಉಡುಪಿ ವಿಧಾನ ಸಭಾಕ್ಷೇತ್ರದಲ್ಲಿ ಕಾಲುದಾರಿಗಾಗಿ ಕಾದಿರಿಸಿದ್ದ ಸ್ಥಳಗಳ ಅತಿಕ್ರಮಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 251 (630)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಉಡುಪಿ ವಿಧಾನಸಭಾ ಕ್ಷೇತ್ರದ ಕಂದಾಯ ಲೋಕೋಪಯೋಗಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಾಲುದಾರಿಗಾಗಿ ಕಾದಿರಿಸಲ್ಪಟ್ಟ ಸ್ಥಳಗಳಲ್ಲಿ ನಡೆದಿರುವ ಅತಿಕ್ರಮಣಗಳನ್ನು ತೆಗೆಸಲಾಗುವುದೆಂದು ಸರ್ಕಾರವು ತಿಳಿಸಿದ್ದುದು ನಿಜವೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕಂದಾಯ ಇಲಾಖೆ ತೆಗೆದುಕೊಂಡ ಕ್ರಮಗಳೇನು?

ಇ) ಈ ಬಗ್ಗೆ ಕ್ರಮ ಕೈಗೊಳ್ಳದಿದ್ದ ಪಕ್ಷದಲ್ಲಿ ಮುಂದೆ ಇಂತಹ ಅತಿಕ್ರಮಣಗಳನ್ನು ಸರ್ಕಾರವು ಸಕ್ರಮಣಗೊಳಿಸುವುದೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ಇಲ್ಲ. ಆದರೂ ಕಂದಾಯ, ಲೋಕೋಪಯೋಗಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ರೋಡ್ ಮಾರ್ಜಿನ್‌ಗಳಿಗಾಗಿ ಕಾದಿರಿಸಲ್ಪಟ್ಟ ಸ್ಥಳಗಳಲ್ಲಿ ನಡೆದಿರುವ ಅಕ್ರಮಗಳನ್ನು ಆಯಾ ಇಲಾಖೆಯವರು ಚಾಲ್ತಿಯಲ್ಲಿರುವ ಕಾಯ್ದೆಗಳನ್ವಯ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಇಲ್ಲ.

ವಿಷಯ:- ಜಿಲ್ಲೆಗಳ ಪುನರ್‌ವಿಂಗಡನೆ ಕುರಿತ ವರದಿ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 254 (650)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿನ ಜಿಲ್ಲೆಗಳ ಪುನರ್‌ವಿಂಗಡಣೆ ಕುರಿತು ವರದಿ ನೀಡಲು ಎಷ್ಟು ಸಮಿತಿಗಳನ್ನು ಸರ್ಕಾರದವರು ರಚಿಸಿದ್ದಾರೆ. (ವಿವರಗಳನ್ನು ನೀಡುವುದು).

ಆ) ಆಡಳಿತ ಸುಧಾರಣೆಗಾಗಿ ಜಿಲ್ಲೆಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಸಮಿತಿಗಳು ನೀಡಿರುವ ತೀರ್ಮಾನಗಳೇನು?

ಇ) ಸಮಿತಿಗಳ ತೀರ್ಮಾನದ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) 1. ಶ್ರೀ ಎಂ. ವಾಸುದೇವ ರಾವ್ ಸಮಿತಿ.

2. ಶ್ರೀ ಎಂ. ಹುಂಡೇಕರ್ ಸಮಿತಿ.

3. ಶ್ರೀ ಪಿ. ಸಿ. ಗದ್ದೀಗೌಡರ್ ಸಮಿತಿ.

ಆ) ಕೆಲವು ಹೊಸ ಜಿಲ್ಲೆ, ಉಪ- ವಿಭಾಗಗಳು ಹಾಗೂ ತಾಲ್ಲೂಕುಗಳನ್ನು ಸೃಜಿಸುವಂತೆ ಎಲ್ಲಾ ಸಮಿತಿಗಳು ಶಿಫಾರಸ್ಸು ಮಾಡಿವೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಕೋರಮಂಗಲದ ಕ್ರೀಡಾಗ್ರಾಮದ ಗೃಹಗಳ ನಿರ್ಮಾಣ ಕಾರ್ಯ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 255 (517)

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೋರಮಂಗಲದ ಕ್ರೀಡಾಗ್ರಾಮದ ಗೃಹಗಳ ನಿರ್ಮಾಣ ಕಾರ್ಯವು ಯಾವಾಗ ಪ್ರಾರಂಭವಾಗಿರುತ್ತದೆ. ಈಗ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪೂರ್ಣಗೊಳ್ಳಬೇಕಿತ್ತು.

ಆ) ನಿಗದಿತ ವೇಳೆಯಲ್ಲಿ ನಿರ್ಮಾಣ ಕಾರ್ಯ ಪೂರೈಸದ ಗುತ್ತಿಗೆದಾರರ ಮೇಲೆ ಸರ್ಕಾರದವರು ಕೈಕೊಳ್ಳಲಿರುವ ಕ್ರಮ ಏನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):-

ಅ) ಕೋರಮಂಗಲದ ಕ್ರೀಡಾಗ್ರಾಮದ ಗೃಹ ನಿರ್ಮಾಣ ಯೋಜನೆಯಡಿಯಲ್ಲಿ ಒಟ್ಟು 2534 ಫ್ಲ್ಯಾಟುಗಳನ್ನು 2 ಹಂತಗಳು ಕಟ್ಟಬೇಕಾಗಿರುತ್ತದೆ.

ಮೊದಲನೆ ಹಂತ - 1406 ಫ್ಲ್ಯಾಟುಗಳು.

ಎರಡನೇ ಹಂತ - 1128 ''